**ದಿಃ 12.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ಅಪಘಾತ ಆಗುವ ಒಂದು ತಿಂಗಳ ಹಿಂದಿನಿಂದ ನಾನು ಎದುರುದಾರರ ರೇಸಾರ್ಟ್ ನಲ್ಲಿ ಕೆಲಸ ಮಾಡುತ್ತಿದ್ದೆನು. ಎದುರುದಾರರ ರೇಸಾರ್‍ಟ್ ನವರು ನನ್ನನ್ನು ಕೆಲಸಕ್ಕೆ ನೇಮಿಸಿಕೊಂಡಿರುವ ಬಗ್ಗೆ ತೋರಿಸಲು ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಎದುರುದಾರ ರೆಸಾರ್ಟಿನವರು ಮೊದಲಿಗೆ ತಾತ್ಕಾಲಿಕವಾಗಿ ಕೆಲಸ ಮಾಡಲು ತಿಳಿಸಿದ್ದರು ಮತ್ತು ನಂತರದಲ್ಲಿ ಖಾಯಂ ಕೆಲಸಗಾರನನ್ನಾಗಿ ಮಾಡುತ್ತೇವೆ ಎಂದು ಕೂಡಾ ತಿಳಿಸಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನನಗೆ ತಿಳಿಸಿದ ಬಗ್ಗೆ ಲಿಖಿತವಾಗಿ ಯಾವುದೇ ದಾಖಲೆ ಇರುವುದಿಲ್ಲ ಆದರೆ ಮೌಖಿಕವಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನನ್ನನ್ನು ಎದುರುದಾರ ರೆಸಾರ್ಟಿನವರು ಕೆಲಸಕ್ಕೆ ನೇಮಿಸಿಕೊಂಡಿರುವುದಿಲ್ಲ ಎಂದರೆ ಸುಳ್ಳು.

2. ಎದುರುದಾರರು ಮೊದಲಿಗೆ ನನಗೆ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳನ್ನು ಸಂಬಳವಾಗಿ ಕೊಡಲು ಮಾತುಕತೆ ಆಗಿತ್ತು. ಎದುರುದಾರರು ನನಗೆ ಸಂಬಳ ಕೊಟ್ಟಿರುವುದಿಲ್ಲ. ನಾನು ಹೇಳುವ ಹಾಗೆ ಇಪ್ಪತ್ತೇಳು ದಿನಗಳವರೆಗೆ ಕೆಲಸ ಮಾಡಿದ ಬಗ್ಗೆ ಸಂಬಳ ಕೊಡುವ ಬಗ್ಗೆ ಎದುರುದಾರರಿಗೆ ಈವರೆಗೂ ಕೇಳಿರುವುದಿಲ್ಲ.

3. ನನ್ನ ಪ್ರಮಾಣ ಪತ್ರಿಕೆಯ ಖಂಡಿಕೆ 3 ರಲ್ಲಿ ನನಗೆ ಎಲ್ಲಾ ರೀತಿಯ ಮಿಷನರಿ ಕೆಲಸದ ಬಗ್ಗೆ ಅನುಭವ ಇದೆ ಎಂದು ತಿಳಿಸಿರುವುದಿಲ್ಲ. ನನಗೆ ಮಿಷನರಿ ಕೆಲಸದ ಅನುಭವ ಇರುವುದಿಲ್ಲ. ನಾನು ಎದುರುದಾರರ ರೆಸಾರ್ಟಿನಲ್ಲಿ ಇಪ್ಪತ್ತೇಳು ದಿನಗಳವರೆಗೆ ಕೆಲಸ ಮಾಡಿರುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

4. ನನಗೆ ಬಾಲಕೃಷ್ಣ ಎಂಬುವವರ ಪರಿಚಯ ಇರುವುದಿಲ್ಲ. ಮೊದಲಿಗೆ ನಾನು, ಸಜಿತ್ ಮತ್ತು ಮದನ್ ರವರು ಎದುರುದಾರರ ರೆಸಾರ್ಟಿನಲ್ಲಿ ಕೆಲಸ ಮಾಡುತ್ತಿದ್ದೆವು. ದಿಃ 07.07.2019 ರಂದು ಎದುರುದಾರರ ರೆಸಾರ್ಟಿನ ಮ್ಯಾನೇಜರ್ ಆದ ಅರುಣ್ ರವರು ಕೆಲಸ ಮಾಡಲು ತಿಳಿಸಿದ್ದರು. ದಿಃ 07.07.2019 ರಂದು ಬಾಲಕೃಷ್ಣರವರು ಈ ರೀತಿಯಾಗಿ ಕೆಲಸ ಮಾಡಬೇಕು ಎಂದು ನನಗೆ ತಿಳಿಸಿರುವುದಿಲ್ಲ. ಎದುರುದಾರ ರೆಸಾರ್ಟಿನ

ಮ್ಯಾನೇಜರ್ ಆದ ಅರುಣ್ ರವರ ಹೇಳಿಕೆಯ ಮೇರೆಗೆ ನಾನು ಕೆಲಸ ಮಾಡುತ್ತಿದ್ದೆನು ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ನಾನು ಅರುಣ್ ರವರ ನಿರ್ದೇಶನದ ಮೇರೆಗೆ ಕೆಲಸ ಮಾಡುತ್ತಿರಲಿಲ್ಲ ಆದರೆ ಬಾಲಕೃಷ್ಣರವರ ಹೇಳಿಕೆಯ ಮೇರೆಗೆ ಕೆಲಸ ಮಾಡುತ್ತಿದ್ದೆನು ಎಂದರೆ ಸುಳ್ಳು.

5. ನಾನು ನನ್ನ ಅಣ್ಣನಾದ ಶ್ರೀವನ್ ಮತ್ತು ಭಾವನಾದ ಸುರೇಶ್ ರವರಿಗೆ ಬಾಲಕೃಷ್ಣರವರ ಜೊತೆ ಕೆಲಸ ಮಾಡುವಾಗ ಅಪಘಾತ ಆಗಿರುತ್ತದೆ ಎಂದು ತಿಳಿಸಿದ ಮೇರೆಗೆ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸುಳ್ಳು. ನಾನು ಎದುರುದಾರರ ರೆಸಾರ್ಟಿನಲ್ಲಿ ಕೆಲಸ ಮಾಡಲು ನೇಮಕಾತಿ ಆಗಿರುವುದಿಲ್ಲ ಆದರೆ ಬಾಲಕೃಷ್ಣರವರ ಬ್ರಾಡ್‌ವೇ ಇಂಡಸ್ಟ್ರೀಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸುಳ್ಳು. ನನ್ನನ್ನು ಎದುರುದಾರ ರೆಸಾರ್ಟಿನವರು ಕೆಲಸಕ್ಕಾಗಿ ನೇಮಿಸಿಕೊಂಡಿರುವುದಿಲ್ಲ ಮತ್ತು ಅವರ ಕೈಕೆಳಗೆ ಯಾವುದೇ ಕೆಲಸವನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ಎದುರುದಾರರು ನನ್ನನ್ನು ನೇಮಕಾತಿ ಮಾಡಿಕೊಳ್ಳದೇ ಇರುವ ಕಾರಣದಿಂದ ನನ್ನ ಬಳಿ ನೇಮಕಾತಿ ಪತ್ರ ಮತ್ತು ಸಂಬಳ ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸುಳ್ಳು. ನಾನು ಬಾಲಕೃಷ್ಣರವರ ಬ್ರಾಡ್‌ವೇ ಇಂಡಸ್ಟ್ರೀಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಎದುರದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸುಳ್ಳು. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸುಳ್ಳು. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ಬಲಗೈಗೆ ಶಸ್ತ್ರ ಚಿಕಿತ್ಸೆ ಮಾಡುವಾಗ ಅದಕ್ಕೆ ಬೇಕಾದಂತಹ ಸಾಮಾಗ್ರಿಗಳನ್ನು ಹೊರಗಡೆಯಿಂದ ತರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

<u>**ಮರುವಿಚಾರಣೆಃ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-

(ಶ್ರೀಮತಿ ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.